ದಿನಾಂಕಃ 21.08.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದ:**

ನಾನು 7 ನೇ ತರಗತಿಯ ವರೆಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ ಸಹಿ ಹಾಕಲು ಬರುತ್ತದೆ. ಓದಲು ಬರೆಯಲು ಅಷ್ಟಾಗಿ ಬರುವುದಿಲ್ಲ. ದೊಡ್ಡಯ್ಯ ಎಂಬುವವರಿಗೆ ಲಕ್ಷ್ಮಣ, ಭೈರಯ್ಯ, ಚನ್ನಯ್ಯ ಮತ್ತು ರುದ್ರಯ್ಯ ಎಂಬ ಮಕ್ಕಳಿದ್ದಾರೆ. ರುದ್ರಯ್ಯ ರವರಿಗೆ 3 ಜನ ಹೆಣ್ಣುಮಕ್ಕಳು, ಚನ್ನಯ್ಯ ರವರಿಗೆ 3 ಜನ ಗಂಡು ಮಕ್ಕಳಿದ್ದಾರೆ. ಭೈರಯ್ಯ ಎಂಬುವವರಿಗೆ ಒಟ್ಟು ಇಬ್ಬರು ಹೆಂಡತಿಯರು. ಅದರಲ್ಲಿ 1 ನೇ ಪ್ರತಿವಾದಿಯವರು ಮೊದಲನೇ ಹೆಂಡತಿಯಾಗಿರುತ್ತಾರೆ. ಸದರಿಯವರು ಬದುಕಿದ್ದಾಗಲೇ ಭೈರಯ್ಯ ರವರು ನನ್ನ ತಾಯಿಯನ್ನು ವಿವಾಹವಾಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಈ ಹಿಂದೆ ದೊಡ್ಡಯ್ಯ ಎಂಬುವವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿ. ದೊಡ್ಡಯ್ಯ ರವರ ಹೆಂಡತಿ ಈಗಲು ಬದುಕಿರುತ್ತಾರೆ ಎಂದರೆ ಸರಿ. ದೊಡ್ಡಯ್ಯ ಮರಣಹೊಂದಿದ ನಂತರ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ರಂಗಮ್ಮ, ಭೈರಯ್ಯ, ಚನ್ನಯ್ಯ, ರುದ್ರಯ್ಯ ಮತ್ತು ಲಕ್ಷ್ಮಣ ರವರುಗಳ ಹೆಸರಿಗೆ ಖಾತೆಯಾಗಿದೆ ಎಂದರೆ ಸಾಕ್ಷಿಯು ಬಾಯಿ ಮಾತಿನಲ್ಲಿ ಮಾತಾಗಿರುತ್ತದೆ ಎಂದು ನುಡಿಯುತ್ತಾರೆ. ಲಕ್ಷ್ಮಣ, ರುದ್ರಯ್ಯ ಮತ್ತು ಚನ್ನಯ್ಯ ಎಂಬುವವರು ಮರಣ ಹೊಂದಿರುತ್ತಾರೆ. ಲಕ್ಷ್ಮಣ, ರುದ್ಯಯ್ಯ, ಭೈರಯ್ಯ ಮತ್ತು ಚನ್ನಯ್ಯ ರವರು ಬದುಕಿದ್ದ ಕಾಲದಲ್ಲಿ ರಂಗಮ್ಮ ಎಂಬುವವರಿಗೆ ಹಕ್ಕು ಕುಲಾಸೆ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ.

ನಿಪಿ-12 ರಂತೆ ದೊಡ್ಡಯ್ಯ ರವರ ಹಿಸ್ಸೆಗೆ 8 ಎಕರೆ ಜಮೀನು ಬಂದಿರುತ್ತದೆ. ಸದರಿಯವರು ಬದುಕಿದ್ದಾಗ ದಾನ ಪತ್ರ ಅಥವಾ ಉಯಿಲಿನ ಮುಖಾಂತರ ಯಾರಿಗೂ ಜಮೀನನ್ನು ಪರಭಾರೆ ಮಾಡಿರುವುದಿಲ್ಲ. ಪ್ರತಿವಾದಿಗಳು ತಮಗೆ ಬಂದ ಹಿಸ್ಸೆಯಲ್ಲಿ ನನಗೂ ಒಂದು ಪಾಲು ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-13 ರಂತೆ ನನ್ನ ಹಿಸ್ಸೆಗೆ 2½ ಎಕರೆ ಜಮೀನು ಬಂದಿರುತ್ತದೆ. ನನ್ನ ತಾಯಿ ಪ್ರಸ್ತುತವಾಗಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಮರಣ ಹೊಂದಿದ ನಂತರ ನಾವು ಮತ್ತು ಪ್ರತಿವಾದಿಯವರು ವಿಭಾಗವನ್ನು ಮಾಡಿಕೊಂಡಿರುತ್ತೇವೆ. ನಿಪಿ-13 ರಂತೆ ನನಗೆ ಬಂದಿರುವ ಹಿಸ್ಸೆಯ ಸ.ನಂ.39/6 ರ ಚೆಕ್ಕುಬಂದಿಯು ಪೂರ್ವಕ್ಕೆ ಎಮ್.ಎಮ್ ಪ್ರಕಾಶ್ ಎಂಬುವವರ ಜಮೀನು, ಪಶ್ಚಿಮಕ್ಕೆ ರಾಜೀವ್ ಗೌಡ ಎಂಬುವವರ ಜಮೀನು, ಉತ್ತರಕ್ಕೆ ಸೋಮೇಗೌಡ ರವರ ಜಮೀನು ಮತ್ತು ದಕ್ಷಿಣಕ್ಕೆ ಎಮ್.ಎಮ್ ಪ್ರಕಾಶ್ ಎಂಬುವವರ ಜಮೀನು. ಸ.ನಂ.40/3 ರ ಜಮೀನಿನ ಚೆಕ್ಕುಬಂದಿಯು ಪೂರ್ವಕ್ಕೆ ಶ್ರೀನಿವಾಸ್ ಗೌಡ ಎಂಬುವವರ ಜಮೀನು, ಪಶ್ಚಿಮಕ್ಕೆ ಎಮ್.ಎಮ್ ರಮೇಶ್ ಗೌಡ ಎಂಬುವವರ ಜಮೀನು, ಉತ್ತರಕ್ಕೆ ರಾಜೀವ್ ಗೌಡ ರವರ ಜಮೀನು ಮತ್ತು ದಕ್ಷಿಣಕ್ಕೆ ಎಮ್.ಎಮ್ ರಮೇಶ್ ಎಂಬುವವರ ಜಮೀನು. ನನ್ನ ಹಿಸ್ಸೆಗೆ ಬಂದಿರುವ ಜಮೀನುಗಳು ಮತ್ತು ದಾವಾ ಸ್ವತ್ತುಗಳು ಒಂದಕ್ಕೊಂದು ಲಗತ್ತಾಗಿರುತ್ತವೆ ಎಂದರೆ ಸರಿ.

ದಾವಾ ಸ್ವತ್ತಿನ ಸೀರಿಯಲ್ ನಂ.3 ರ ಚೆಕ್ಕುಬಂದಿಯು ಪೂರ್ವಕ್ಕೆ ಕೆರೆ, ಪಶ್ಚಿಮಕ್ಕೆ

ಸೋಮೇಗೌಡ ರವರ ಬೇಲಿ, ಉತ್ತರಕ್ಕೆ ಕೆರೆ ಮತ್ತು ದಕ್ಷಿಣಕ್ಕೆ ರಾಜೀವ ಗೌಡ ಎಂಬುವವರ ತೋಟದ ಬೇಲಿ ಬರುತ್ತದೆ. ದಾವಾ ಸ್ವತ್ತಿನ ಸೀರಿಯಲ್ ನಂ.2 ರ ಚೆಕ್ಕುಬಂದಿಯು ಪೂರ್ವಕ್ಕೆ ಕೆರೆ, ಪಶ್ಚಿಮಕ್ಕೆ ಸೋಮೇಗೌಡ ರವರ ಬೇಲಿ, ಉತ್ತರಕ್ಕೆ ರಾಜೀವ ಗೌಡ ಎಂಬುವವರ ತೋಟದ ಬೇಲಿ ಮತ್ತು ದಕ್ಷಿಣಕ್ಕೆ ಪ್ರಕಾಶ್ ಗೌಡ ಎಂಬುವವರ ತೋಟದ ಬೇಲಿ ಬರುತ್ತದೆ. ದಾವಾ ಸ್ವತ್ತಿನ ಸೀರಿಯಲ್ ನಂ.1 ರ ಚೆಕ್ಕುಬಂದಿಯು ಪೂರ್ವಕ್ಕೆ ಕೆರೆ, ಪಶ್ಚಿಮಕ್ಕೆ ಸೋಮೇಗೌಡ ರವರ ಬೇಲಿ, ಉತ್ತರಕ್ಕೆ ರಾಜೀವ ಗೌಡ ಎಂಬುವವರ ತೋಟದ ಬೇಲಿ ಮತ್ತು ದಕ್ಷಿಣಕ್ಕೆ ಪ್ರಕಾಶ್ ಗೌಡ ಎಂಬುವವರ ತೋಟದ ಬೇಲಿ ಬರುತ್ತದೆ. ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಕ್ಷೆಯ ಪ್ರಕರಾವಾಗಿ ಗಡಿ ಗುರುತನ್ನು ತಿಳಿಸಲಾಗಿರುತ್ತದೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಕ್ಷೆಯನ್ನು ಹಾಜರುಪಡಿಸಿರುತ್ತೇನೆ. ನಾನು ಈ ಮೇಲೆ ಹೇಳಿದ ಚೆಕ್ಕುಬಂದಿಯನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನ ಯಾವ ದಿಕ್ಕಿನಲ್ಲಿ ಪ್ರತಿವಾದಿಯವರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.39/7 ರ ಪೂರ್ವ ದಿಕ್ಕಿಗೆ ಪ್ರತಿವಾದಿಯವರು ಜಮೀನು ಬರುತ್ತದೆ.

ನನ್ನ ಮತ್ತು ಪ್ರತಿವಾದಿಯವರು ನಡುವೆ ಆದಂತಹ ವಿಭಾಗದ ಸ್ವತ್ತುಗಳ ಬಾಬ್ತು ನಾನು ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ. ನಿಪಿ-13 ರಂತೆ ನನ್ನ ಹಿಸ್ಸೆಗೆ ಬಂದಿರುವ ಸ್ವತ್ತಿನಲ್ಲಿ ನಾನು ಮತ್ತು ಪ್ರತಿವಾದಿಯವರು ಹಿಸ್ಸೆಗೆ ಬಂದಿರುವ ಸ್ವತ್ತಿನಲ್ಲಿ ಪ್ರತಿವಾದಿಯವರು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ದೊಡ್ಡಯ್ಯ ಎಂಬುವರ ಹೆಂಡತಿಯಾದ ಗಂಗಮ್ಮ ಎಂಬುವವರಿಗೆ ಯಾವುದೇ ಸ್ವಯಾರ್ಜಿತ ಸ್ವತ್ತು ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.